## ಜಾಣರ ಪೆಟ್ಟಿಗೆ

### ಹಳೆಯ ದೃಶ್ಯಗಳಿಗೆ ಮೆರುಗು ತುಂಬಿದ ‘ಮಹಾನಟಿ’



ಝೀ ಕನ್ನಡದ ‘ಮಹಾನಟಿ’ ಶೋ ವಿಶೇಷವಾಗಿದೆ. 60–70ರ ದಶಕದ ಚಲನಚಿತ್ರಗಳ ಸುಮಧುರ ಗೀತೆ ಮತ್ತು ಸನ್ನಿವೇಶವನ್ನು ‘ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್’ ತಂಡದ ಜೊತೆ ಪ್ರದರ್ಶಿಸಿದರು. ಅಂದಿನ ಸಿನಿಮಾಗಳ ದೃಶ್ಯ, ವಸ್ತ್ರ ವಿನ್ಯಾಸ, ಹಿನ್ನೆಲೆಯನ್ನು ಮರುಸೃಷ್ಟಿ ಮಾಡಿದ್ದೂ ಚೆನ್ನಾಗಿತ್ತು.

‘ವೀರಕೇಸರಿ’, ‘ರಂಗನಾಯಕಿ’, ‘ಬಯಲುದಾರಿ’, ‘ಕರ್ಪೂರದ ಗೊಂಬೆ’, ‘ಮುತ್ತಿನ ಹಾರ’ ಹೀಗೆ ಹಲವು ಸಿನಿಮಾಗಳಿಗೆ ಮರುಜೀವ ನೀಡಿದಂತೆ ಇತ್ತು. ಆ ಕಾಲದ ನಟ ನಟಿಯರ ಅಭಿನಯವನ್ನು ಮಹಾನಟಿಯರು ಅನುಕರಿಸಿ ವೀಕ್ಷಕರನ್ನು ರಂಜಿಸಿದರು.

—ಭಾರತೀ ಗಂಗಾಧರ್, ಬೆಂಗಳೂರು

### ಹಸುರ ಹೊಲದಲ್ಲಿ ಕನ್ನಡದ ಹೊನಲು

ಝೀ ಕನ್ನಡದ ‘ಬ್ರಹ್ಮಗಂಟು’ನಲ್ಲಿ ನಾಯಕಿ ದೀಪಾ ಮತ್ತು ನಾಯಕ ಚಿರು ಅವರು ಹೊಲ–ಗದ್ದೆಗಳ ಬಯಲಲ್ಲಿ ಹಾಡಿ ಕುಣಿದ ದೃಶ್ಯ ಪ್ರಸಾರವಾಯಿತು. ಖಳನಾಯಕಿಯರ ಅಬ್ಬರಗಳ ನಡುವೆ ಕಳೆದು ಹೋಗುತ್ತಿರುವ ಧಾರಾವಾಹಿಗಳ ಮಧ್ಯದಲ್ಲಿ ಇದು ಹೊಸತನ ತಂದಿದೆ ಎಂದು ಅನ್ನಿಸಿತು.

ವಾರದ ಪತ್ರ

### ಶಂಕೆ ಮೂಡಿಸಿದ ಹೊಸ ಒಗಟು

ಜನಪದ ಗೀತೆ, ಒಗಟು, ಗಾದೆ ನಮ್ಮ ನೆಲದ ಸೊಗಡನ್ನು ಬಿಂಬಿಸುವುದರ ಜೊತೆಗೆ ನಮ್ಮ ಪರಂಪರೆಯ ಕಲಾ ಪ್ರಕಾರವನ್ನು ಸ್ಮರಿಸುತ್ತವೆ. ಈಚೆಗೆ ಚಂದನದ ‘ಥಟ್ ಅಂತ ಹೇಳಿ’ ಕಾರ್ಯಕ್ರಮದಲ್ಲಿ ಸ್ಪರ್ಧಿ ಒಬ್ಬರಿಗೆ ಒಗಟಿಗೆ ಸಂಬಂಧಿಸಿದಂತೆ ‘ತೊಟ್ಟಿಲು ಬಿಸಾಡಿ ಮಗುನ ತಿನ್ನೋದು’ ಎಂಬ ಪ್ರಶ್ನೆ ಕೇಳಲಾಯಿತು; ನಂತರ ಕಾರ್ಯಕ್ರಮದ ನಿರೂಪಕರು ಇದಕ್ಕೆ ಸರಿ ಉತ್ತರ ‘ಬಾಳೆಹಣ್ಣು’ ಎಂದು ಹೇಳಿದರು. ‘ಬಂಗಾರ ಬಿಸಾಡಿ ಬೆಳ್ಳಿ ತಿನ್ನೋದು’, ‘ಬಟ್ಟೆ ಕಳಚಿ ಬಾವಿಗೆ ಹಾರುವುದು’ ಎಂಬಂತಹ ಒಗಟಿಗೂ ಇದೇ ಉತ್ತರ ಕೇಳಿದ್ದೇವೆ. ಆದರೆ ‘ತೊಟ್ಟಿಲು ಬಿಸಾಡಿ ಮಗು ತಿನ್ನೋದು’ ಎಂಬುವುದು ನಮಗೆ ಹೊಸದು. ಆ ಒಗಟು ಕೂಡ ಅಷ್ಟು ಸಮಂಜಸ ಅನ್ನಿಸಲಿಲ್ಲ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಜೊತೆಗೆ ಕನ್ನಡ ಭಾಷೆಯ ಮಹತ್ವದ ಬಗ್ಗೆ ನರಸಿಂಹ ಮತ್ತು ಚಿರು ಸಂಭಾಷಣೆ ಆದರ್ಶ ಎಂದು ಅನ್ನಿಸುತ್ತವೆ. ಮೆಲುಹಾಸ್ಯದೊಂದಿಗೆ ಮೂಡಿಬರುತ್ತಿರುವ, ಆಗಾಗ್ಗೆ ಹಳ್ಳಿಯ ಹಚ್ಚ ಹಸುರಿನ ಸನ್ನಿವೇಶದ ದೃಶ್ಯಗಳು ವೀಕ್ಷಕರಲ್ಲಿ ತಾಜಾ ಅನ್ನುವ ಭಾವನೆ ಮೂಡಿಸುತ್ತವೆ.

—ರಮಣ್ ಶೆಟ್ಟಿ ರೆಂಜಾಳ, ಮುಂಬಯಿ

### ಮಾದರಿ ರೂಪಿಸಿದ ಪುಟ್ಟಕ್ಕ

ಝೀ ಕನ್ನಡದ ‘ಪುಟ್ಟಕ್ಕನ ಮಕ್ಕಳು’ ಸಾವಿರ ಕಂತುಗಳನ್ನು ದಾಟಿದೆ. ಅದರಲ್ಲಿ ಉಮಾಶ್ರೀ ಅವರ ನಟನೆ ಅಮೋಘವಾಗಿದೆ. ಗ್ರಾಮೀಣ ಸೊಗಡಿನ ಈ ಧಾರಾವಾಹಿ ಆರಂಭದಿಂದಲೂ ಚೆನ್ನಾಗಿ ಮೂಡಿಬಂದಿದೆ. ಅರ್ಥಪೂರ್ಣ ಕಥೆಗೆ ಕಲಾವಿದರ ನೈಜ ಅಭಿನಯ, ಮಹಿಳೆಯರಿಗೆ ಮಾದರಿ ಅನ್ನಿಸುವ ಕಥಾ ಹಂದರದ ನಿರೂಪಣೆ ಸೊಗಸಾಗಿತ್ತು.

ಮಹಿಳೆ ಅಂದರೆ ಹೀಗೇ ಇರಬೇಕು ಎನ್ನುವ ಕಲ್ಪನೆಯನ್ನು ಇದು ಕಟ್ಟಿಕೊಟ್ಟಿದೆ. ಎಷ್ಟೋ ಸಂದರ್ಭದಲ್ಲಿ ನೈಜ ಬದುಕಿಗೆ ಹತ್ತಿರವಾಗಿದೆ ಎಂದೂ ಅನ್ನಿಸಿದೆ. ಆಧುನಿಕ ಸಮಾಜದಲ್ಲಿ ಮಹಿಳೆಯ ಪಾಡು ಹೇಳತೀರದು. ‘ಪುಟ್ಟಕ್ಕನ ಮಕ್ಕಳು’ ಎರಡು ತಲೆಮಾರಿನ ಅಂತರವನ್ನೂ ಮನೋಜ್ಞವಾಗಿ ಚಿತ್ರಿಸಿದೆ.

—ರಾಜೇಂದ್ರ, ಹೆಗಡೆ, ಹಾವೇರಿ



### ಸ್ಫೂರ್ತಿ ತುಂಬಿದ ಕಾರ್ಯಕ್ರಮ

ಚಂದನದ ‘ಬದುಕ ಬಂಡಿ’ ಬೀದಿ ಬದಿ ವ್ಯಾಪಾರಿಗಳ ಕುರಿತ ನೇರ ಮಾತು ಒಂದು ವಿಭಿನ್ನ ಕಾರ್ಯಕ್ರಮ. ಇತ್ತೀಚಿನ ದಿನಗಳಲ್ಲಿ ತಮ್ಮ ಜೀವನ ನಿರ್ವಹಣೆಗಾಗಿ ಮಹಿಳೆಯರೂ ಆಟೊ ಓಡಿಸುತ್ತಾರೆ. ಅವರ ಬಗ್ಗೆ ಒಂದು ಸಂದರ್ಶನ ಮಾಡಿ ಪ್ರಸಾರ ಮಾಡಬೇಕೆಂದು ಕೋರಿಕೆ. ಈ ರೀತಿಯ ಕಾರ್ಯಕ್ರಮಗಳು ಅನೇಕರಿಗೆ ಸ್ಫೂರ್ತಿಯನ್ನು ತುಂಬುತ್ತವೆ. ಜೊತೆಗೆ ಕಾರ್ಯಕ್ರಮದಲ್ಲಿಯೂ ಭಿನ್ನತೆಯನ್ನು ಮೂಡಿಸುತ್ತದೆ. ಇಂತಹ ಹೊಸ ಬಗೆಯ ಕಾರ್ಯಕ್ರಮಗಳು ಇನ್ನೂ ಹೆಚ್ಚಾಗಲಿ.

—ಕೆ.ಎಸ್. ಸೋಮೇಶ್ವರ

### ‘ಶುಭೋದಯ’ದಲ್ಲಿ ವ್ಯಂಗ್ಯಚಿತ್ರ

ಚಂದನದ ‘ಶುಭೋದಯ’ ಕಾರ್ಯಕ್ರಮ ಅರ್ಥಪೂರ್ಣವಾಗಿದೆ. ಎಲೆಮರೆ ಕಾಯಿಯಂತಿರುವ ಪ್ರತಿಭೆಗಳನ್ನು ಈ ವೇದಿಕೆಯಲ್ಲಿ ಪರಿಚಯಿಸುತ್ತಿದೆ. ಆ ವೇದಿಕೆಯ ಮೂಲಕ ಸಾಧಕರ ಏಳುಬೀಳುಗಳನ್ನು ನೀಡುತ್ತಾರೆ. ಈಚೆಗೆ ಕಾರ್ಟೂನಿಸ್ಟ್ ವಿ.ಕೆ. ಚಂದ್ರಶೇಖರ ಹಾಗೂ ವಿ.ವಿ. ಭಟ್ ಅವರ ಕಲೆಯ ಮತ್ತು ಅವರ ಬೆಳವಣಿಗೆ ಕುರಿತ ಸಂದರ್ಶನ ಚೆನ್ನಾಗಿತ್ತು.

—ಸಾವಿತ್ರಮ್ಮ ಕೆ. ವಿಭೂತಿ, ಹರಿಹರ

### ಸುದ್ದಿಯೋ ರಾಜಕೀಯವೋ

ಕನ್ನಡದ ಸುದ್ದಿವಾಹಿನಿಗಳನ್ನು ನೋಡುತ್ತಿದ್ದರೆ, ಇವು ವರ್ತಮಾನದ ಘಟನೆಗಳ ವಿವರ ನೀಡುತ್ತಿವೆಯೋ ಇಲ್ಲವೇ ರಾಜಕೀಯ ಪಕ್ಷಗಳ ಕ್ಷುಲ್ಲಕ ವಿದ್ಯಮಾನಗಳಿಗೆ ಭೂತಗನ್ನಡಿ ಹಿಡಿಯುತ್ತಿವೆ ಎಂದು ಅನ್ನಿಸುತ್ತದೆ.

‘ಕಂತೆಗೆ ತಕ್ಕ ಬೊಂತೆ’ ಅನ್ನೋ ಗಾದೆಯ ಮಾತಿನಂತೆ ಸಿಕ್ಕವರಿಗೆ ಅವರಿವರ ಮಾತಿಗೆ ತಮ್ಮ ಪ್ರತಿಕ್ರಿಯೆ ಕೇಳುತ್ತಾರೆ. ನಂತರ ಮಸಾಲೆ ಜೊತೆ ಸಖತ್ ಸುದ್ದಿ ನೀಡುವುದು ಸಾಮಾನ್ಯವಾಗಿದೆ. ಅವರು ಇವರನ್ನು, ಇವರು ಅವರನ್ನು ದೂಷಿಸುವುದೇ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷದ ಸದಸ್ಯರ ಕಾಯಕ ಅದಕ್ಕೆ ಸುದ್ದಿವಾಹಿನಿಗಳು ಸ್ವಯಂ ಪ್ರೇರಿತವಾಗಿ ವೇದಿಕೆ ಕಲ್ಪಿಸುತ್ತಿವೆ. ವಾರ್ತೆಗಳು ಎಂದರೆ ದೇಶದ ಆಗುಹೋಗುಗಳ ಬಗ್ಗೆ ತಿಳಿಸಬೇಕು.

—ಆರ್. ವೀರೇಶ್ ಕುಮಾರ್, ಬೆಂಗಳೂರು